**ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾ.ದಂಃ ರವರ ನ್ಯಾಯಾಲಯ, ಮೂಡಿಗೆರೆ**
**ಸಿ.ಸಿ.572/2024**

| | | |
|---|---|---|
| ಸಾಕ್ಷಿದಾರರ ಹೆಸರು | : ಹೆಚ್. ಡಿ. ಯೋಗೇಶ್ | ಪ್ರಾಸಾ-7 |
| ತಂದೆಯ ಹೆಸರು | : ದೊಡ್ಡ ದೇವರಾಜೇಗೌಡ | ಚಾಸಾ-8 |
| ವಯಸ್ಸು | : 43 ವರ್ಷ | ಪ್ರಮಾಣ ವಚನ ಬೋಧಿಸಲಾದ |
| ಉದ್ಯೋಗ | : ಮುಖ್ಯ ಪೇದೆ | ದಿನಾಂಕಃ 28.10.2025. |
| ವಾಸಸ್ಥಳ | : ಹಾಸನ ಬೆರಳಚ್ಚು ಮುದ್ರೆ ಘಟಕ | |

**:ಮುಖ್ಯ ವಿಚಾರಣೆಃ ಪ್ರಾಜ್ಞ್ಯಾಸ.ಸ.ಅ. ರವರಿಂದ:**

ನಾನು 2015 ರಿಂದ ಡಿಸೆಂಬರ್ 2023 ರವರೆಗೂ ಚಿಕ್ಕಮಗಳೂರಿನ ಬೆರಳಚ್ಚು ಮುದ್ರೆ ಘಟಕದಲ್ಲಿ ಮುಖ್ಯ ಪೇದೆಯಾಗಿ ಕರ್ತವ್ಯ ನಿರ್ವಹಿಸಿರುತ್ತೇನೆ.

ದಿ.21.10.2023 ರಂದು ಚಿಕ್ಕಮಗಳೂರಿನ ನಿಯಂತ್ರಣ ಕೊಠಡಿಯಿಂದ ಕುದುರೆಮುಖದ ಸಂಸೆ ಗ್ರಾಮದಲ್ಲಿ ಕಳ್ಳತನವಾಗಿರುವ ಬಗ್ಗೆ ಠಾಣಾ.ಮೊ.ನಂ.18/2023 ರಡಿಯಲ್ಲಿ ಪ್ರಕರಣ ದಾಖಲಾಗಿರುವ ಬಗ್ಗೆ ಮಾಹಿತಿಯು ಬಂದಿದ್ದು ಮತ್ತು ಸದರಿ ಪ್ರಕರಣಕ್ಕೆ ಸಂಬಂಧಿಸಿದಂತೆ, ಘಟನಾ ಸ್ಥಳವನ್ನು ಪರೀಕ್ಷಿಸಿ ಬೆರಳಚ್ಚಿಗೆ ಸಂಬಂಧಿಸಿದಂತೆ ವರದಿಯನ್ನು ಕೋರಿರುತ್ತಾರೆ. ಸದರಿ ಮನವಿಯ ಮೇರೆಗೆ ಅದೇ ದಿನ ರಾ.8.00 ರ ಸಮಯಕ್ಕೆ ನಾವು ಘಟನಾ ಸ್ಥಳಕ್ಕೆ ಹೋಗಿ ಪರೀಕ್ಷಿಸಲಾಗಿ, ಬೀರುವಿನ ಮೇಲೆ ಮೂರು ಆಕಸ್ಮಿಕ ಬೆರಳಚ್ಚು ಮುದ್ರಣ ದೊರಕಿರುತ್ತವೆ. ನಂತರ ಸದರಿ ಬೆರಳಚ್ಚು ಮುದ್ರಣವನ್ನು ತೆಗೆದುಕೊಂಡು ಬಂದು ನಮ್ಮ ಇಲಾಖೆಯ ಸಾಫ್ಟ್ ವೇರ್ ತಂತ್ರಾಂಶದ ಮುಖಾಂತರ ಪರೀಕ್ಷಿಸಲಾಗಿ, ಸದರಿ ಸಮಯದಲ್ಲಿ ಯಾವುದೇ ಗುರುತು ಪತ್ತೆಯಾಗಿರುವುದಿಲ್ಲ. ನಂತರ ದಿ.01.12.2023 ರಂದು ಕುದುರೆಮುಖ ಪೋಲಿಸ್ ಠಾಣೆಯವರು ಅನುಮಾನಸ್ಪಾದ ವ್ಯಕ್ತಿಗಳ ಬೆರಳು ಮುದ್ರೆಗಳನ್ನು ತೆಗೆದು ನಮಗೆ ಪರೀಕ್ಷೆಗಾಗಿ ಕಳುಹಿಸಿಕೊಟ್ಟಿರುತ್ತಾರೆ. ನಂತರ ಸದರಿ ಬೆರಳು ಮುದ್ರೆಗಳನ್ನು ಪರೀಕ್ಷಿಸಿ ನೋಡಲಾಗಿ ಅವುಗಳಲ್ಲಿ 1 ನೇ ಆರೋಪಿಯ ಬಲಗೈ ಹೆಬ್ಬೆರಳಿನ ಮುದ್ರೆಯು ನಾವು ದಿ.21.10.2023 ರಂದು ಘಟನಾ ಸ್ಥಳದಿಂದ ಸಂಗ್ರಹಿಸಿಕೊಂಡು ಬಂದ ಆಕಸ್ಮಿಕ ಬೆರಳಚ್ಚಿನ ಗುರುತಿನೊಂದಿಗೆ ಹೋಲಿಕೆಯಾಗಿರುತ್ತದೆ. ಸದರಿ ಪರೀಕ್ಷೆಗೆ ಸಂಬಂಧಿಸಿದಂತೆ ದಿ.04.12.2023 ರಂದು ನಾವು ವರದಿಯನ್ನು ನೀಡಿರುತ್ತೇವೆ.

ಸಾಕ್ಷಿಯು ದಿ.22.10.2023 ರಂದು ತಾವು ನೀಡಿದ ಘಟನಾ ಸ್ಥಳದ ಪರೀಕ್ಷಾ ವರದಿಯನ್ನು ಮತ್ತು ಅದರಲ್ಲಿರುವ ಸಾಕ್ಷಿಯು ಸಹಿಯನ್ನು ನೋಡಿ ಗುರುತಿಸಿದ್ದು, ಸದರಿ ವರದಿಯನ್ನು ನಿಪಿ-18 ಮತ್ತು ಸಾಕ್ಷಿಯು ಸಹಿಯನ್ನು ನಿಪಿ-18(ಎ) ಎಂದು ಗುರುತಿಸಲಾಯಿತು. ಸಾಕ್ಷಿಯು ತಾವು ನೀಡಿದ ಬೆರಳಚ್ಚು ಮುದ್ರೆಯ ಪರೀಕ್ಷಾ ಪ್ರಮಾಣ ಪತ್ರವನ್ನು ಮತ್ತು ಅದರಲ್ಲಿರುವ ಸಾಕ್ಷಿಯು ಸಹಿಯನ್ನು ನೋಡಿ ಗುರುತಿಸಿದ್ದು, ಸದರಿ ಪ್ರಮಾಣ ಪತ್ರವನ್ನು ನಿಪಿ-19 ಮತ್ತು ಸಾಕ್ಷಿಯು ಸಹಿಯನ್ನು ನಿಪಿ-19(ಎ) ಎಂದು ಗುರುತಿಸಲಾಯಿತು. ದಿ.04.12.2023 ರಂದು ತಾವು ಕುದುರೆಮುಖ ಪೋಲಿಸ್ ಠಾಣೆಯವರಿಗೆ ನೀಡಿದ ವರದಿ ಮತ್ತು ಅದರಲ್ಲಿರುವ ಸಾಕ್ಷಿಯು ಸಹಿಯನ್ನು ನೋಡಿ ಗುರುತಿಸಿದ್ದು, ಸದರಿ ವರದಿಯನ್ನು ನಿಪಿ-20 ಮತ್ತು ಸಾಕ್ಷಿಯು ಸಹಿಯನ್ನು ನಿಪಿ-20(ಎ) ಎಂದು

ಗುರುತಿಸಲಾಯಿತು. ದಿ.04.12.2023 ರಂದು ತಾವು ನೀಡಿದ ಆಕಸ್ಮಿಕ ಬೆರಳಚ್ಚು ಮುದ್ರೆಯ ಪರೀಕ್ಷಾ ಪ್ರಮಾಣ ಪತ್ರವನ್ನು ಮತ್ತು ಅದರಲ್ಲಿರುವ ಸಾಕ್ಷಿಯು ಸಹಿಯನ್ನು ನೋಡಿ ಗುರುತಿಸಿದ್ದು, ಸದರಿ ಪ್ರಮಾಣ ಪತ್ರವನ್ನು ನಿಪಿ-21 ಮತ್ತು ಸಾಕ್ಷಿಯು ಸಹಿಯನ್ನು ನಿಪಿ-21(ಎ) ಎಂದು ಗುರುತಿಸಲಾಯಿತು.

ಸಾಕ್ಷಿಯು ತಾವು ನೀಡಿದ್ದ ಬೆರಳಚ್ಚು ಮುದ್ರೆಯ ಹೋಲಿಕೆ ಪ್ರತಿಯನ್ನು ಮತ್ತು ಅದರಲ್ಲಿರುವ ಸಾಕ್ಷಿಯು ಸಹಿಯನ್ನು ನೋಡಿ ಗುರುತಿಸಿದ್ದು, ಸದರಿ ಹೋಲಿಕೆ ಪ್ರತಿಯನ್ನು ನಿಪಿ-22 ಮತ್ತು ಸಾಕ್ಷಿಯು ಸಹಿಯನ್ನು ನಿಪಿ-22(ಎ) ಎಂದು ಗುರುತಿಸಲಾಯಿತು. ದಿ.04.12.2023 ರಂದು ತಾವು ನೀಡಿದ ಅಭಿಪ್ರಾಯಕ್ಕೆ ಆಧಾರಗಳ ಪ್ರತಿಯನ್ನು ಅದಕ್ಕೆ ಲಗತ್ತಿಸಿದಂತೆ ಬೆರಳು ಮುದ್ರೆ ಪ್ರಪತ್ರ ಮತ್ತು ಅದರಲ್ಲಿರುವ ಸಾಕ್ಷಿಯು ಸಹಿಯನ್ನು ನೋಡಿ ಗುರುತಿಸಿದ್ದು, ಸದರಿ ಆಧಾರದ ಪ್ರತಿಯನ್ನು ಪ್ರಪತ್ರದೊಂದಿಗೆ ಒಟ್ಟಾಗಿ ನಿಪಿ-23 ಮತ್ತು ಸಾಕ್ಷಿಯು ಸಹಿಯನ್ನು ನಿಪಿ-23(ಎ) ಎಂದು ಗುರುತಿಸಲಾಯಿತು.

**<u>ಪಾಟೀ ಸವಾಲುಃ ಆರೋಪಿ ಪರ ಶ್ರೀ ಪಿ.ಕೆ. ವಕೀಲರಿಂದಃ</u>**

ನಾನು ಬಿ.ಎ. ಪದವೀಧರ. ನಾನು ಬೆರಳಚ್ಚು ತಜ್ಞನಾಗಿ ಕರ್ತವ್ಯ ನಿರ್ವಹಿಸಲು ಬಿ.ಎ. ಪದವಿಯನ್ನು ಹೊಂದಿರಬೇಕು. ಬೆರಳಚ್ಚು ತಜ್ಞನಾಗಿ ಕರ್ತವ್ಯ ನಿರ್ವಹಿಸಲು ನಾನು All India Board Examination of Finger Prints ರಡಿಯಲ್ಲಿ ತರಬೇತಿಯನ್ನು ಪಡೆದಿರುತ್ತೇನೆ. ಸದರಿ ದಾಖಲಾತಿಯನ್ನು ಪ್ರಸ್ತುತ ಪ್ರಕರಣದ ತನಿಖಾದಿಕಾರಿಗೆ ನೀಡಿರುವುದಿಲ್ಲ. 2019 ರಿಂದ ಇಲ್ಲಿಯವರೆಗೂ ನಾನು ಬೆರಳಚ್ಚು ತಜ್ಞನಾಗಿ ಕೆಲಸ ನಿರ್ವಹಿಸುತ್ತಿರುತ್ತೇನೆ. ಇದು ಎರಡನೇ ಬಾರಿ ನಾನು ಬೆರಳಚ್ಚು ತಜ್ಞನಾಗಿ ವರದಿಯನ್ನು ನೀಡಿರುವುದು. ನಾನು ಈ ಹಿಂದೆಯೂ ಒಂದು ಪ್ರಕರಣದಲ್ಲಿ ಖಚಿತವಾದ ವರದಿಯನ್ನು ನೀಡಿರುತ್ತೇನೆ. ನನಗೆ ಸ.6.45 ರ ಸಮಯಕ್ಕೆ ಪ್ರಕರಣಕ್ಕೆ ಸಂಬಂಧಿಸಿದಂತೆ ಮಾಹಿತಿಯು ಬಂದಿರುತ್ತದೆ. ನಮಗೆ ನಿಸ್ತಂತು ಕೊಠಡಿಯಿಂದ ಮಾಹಿತಿ ಬಂದಿರುತ್ತದೆ. ಸದರಿ ಸಮಯದಲ್ಲಿ ನಾನು ಚಿಕ್ಕಮಗಳೂರಿನಲ್ಲಿ ವಾಸಿಸುತ್ತಿರುತ್ತೇನೆ. ಮಾಹಿತಿ ಬಂದ 10 ನಿಮಿಷದಲ್ಲಿ ನಾವು ಘಟನಾ ಸ್ಥಳಕ್ಕೆ ಹೊರಟಿರುತ್ತೇವೆ, ರಾ.8.00 ರ ಸಮಯಕ್ಕೆ ಘಟನಾ ಸ್ಥಳಕ್ಕೆ ತಲುಪಿರುತ್ತೇವೆ. ಘಟನಾ ಸ್ಥಳವನ್ನು ಕ್ರೈಂ ಸಿಬ್ಬಂಧಿಗಳಿಂದ ಪಡೆದುಕೊಂಡಿರುತ್ತೇವೆ. ನಾವು ಘಟನಾ ಸ್ಥಳಕ್ಕೆ ಸಲುಪುವ ವರೆಗೂ ಸದರಿ ಜಾಗಕ್ಕೆ ಯಾರೂ ಹೋಗದಂತೆ ಪೋಲಿಸರು ನೋಡಿಕೊಂಡಿದ್ದರು. ಸದರಿ ಬಾಬ್ತು ಯಾವುದೇ ಫೋಟೋವನ್ನು ತೆಗೆದಿರುವುದಿಲ್ಲ.

ನಾವು ಸ್ಥಳಕ್ಕೆ ಹೋದ ಸಮಯದಲ್ಲಿ ತನಿಖಾಧಿಕಾರಿಗಳು, ಕ್ರೈಂ ಸಿಬ್ಬಂಧಿಗಳು ಮತ್ತು ಮನೆಯವರು ಇದ್ದರು. ಘಟನೆ ನಡೆದ 2 ½ ಗಂಟೆ ಬಿಟ್ಟು ನಾವು ಸ್ಥಳಕ್ಕೆ ಹೋಗಿರುತ್ತೇವೆ. ಅಷ್ಟರಲ್ಲಿ ಇತರೆ ಗ್ರಾಮಸ್ಥರು ಬಂದು ಹೋಗುವ ಸಾಧ್ಯತೆ ಇದೆ ಎಂದರೆ ಸರಿಯಲ್ಲ. ಬೀರುವಿನ ಹೊರತುಪಡಿಸಿ ಇತರೆ ಯಾವುದೇ ವಸ್ತುಗಳ ಮೇಲೆ ಬೆರಳಚ್ಚು ಮುದ್ರೆಯು ದೊರಕಿರುವುದಿಲ್ಲ. ನಾವು ಹೋಗುವ ಮೊದಲು ಪೊಲೀಸ್ ಸಿಬ್ಬಂಧಿಗಳು ಯಾವುದೇ ಬೀರುವಾಗಲಿ, ಅಲ್ಲಿಯ ವಸ್ತುಗಳನ್ನು ಮುಟ್ಟಿರುವುದಿಲ್ಲ. ಬೆರಳಚ್ಚು ಮುದ್ರೆಯನ್ನು ಸಂಗ್ರಹಿಸುವ ಫೋಟೋ ಮತ್ತು

ವಿಡಿಯೋ ಮಾಡಿರುವುದಿಲ್ಲ. ಬೆರಳಚ್ಚು ತೆಗೆಯುವ ಸಮಯದಲ್ಲಿ ಸ್ಥಳದ ಗುರುತನ್ನು ಬರೆದುಕೊಂಡಿರುವುದಿಲ್ಲ. ನಾವು ಬೆರಳಚ್ಚು ಮುದ್ರೆಯನ್ನು ಪೌಡರ್ ನ್ನು ಹಾಕಿ Manual ಮುಖಾಂತರ ತೆಗೆದುಕೊಳ್ಳಲಾಯಿತು. ಸದರಿಯ ವಿಷಯವನ್ನು ನಮ್ಮ ವರದಿಯಲ್ಲಿ ತಿಳಿಸಿರುವುದಿಲ್ಲ ಎಂದರೆ ಸರಿ. ನಾವು ಬೆರಳಚ್ಚು ಮುದ್ರೆಯನ್ನು ಪಡೆದುಕೊಳ್ಳುವ ಪೂರ್ವದಲ್ಲಿ ಮುಂಜಾಗ್ರತೆ ಕ್ರಮಗಳನ್ನು ತೆಗೆದುಕೊಂಡಿರುತ್ತೇವೆ. ಮುಂಜಾಗ್ರತೆ ಕ್ರಮ ಕೈಗೊಂಡ ಬಗ್ಗೆ ನಾವು ಯಾವುದೇ ಫೋಟೋವನ್ನು ತೆಗೆದಿರುವುದಿಲ್ಲ, ಪೊಲೀಸ್ ಸಿಬ್ಬಂಧಿಗಳು ತೆಗೆದಿರಬಹುದು.

ಬೆರಳಚ್ಚು ಮುದ್ರೆಯನ್ನು ನಾನು ಮತ್ತು ನಮ್ಮ ಇನ್ಸೊರ್ವ ಸಿಬ್ಬಂಧಿಯಾದ ಕುಮಾರಪ್ಪ ಎ.ಟಿ ಎಂಬುವವರು ತೆಗೆದುಕೊಂಡಿರುತ್ತೇವೆ. ಸದರಿ ವ್ಯಕ್ತಿಯು ಪಿ.ಯು.ಸಿ. ವಿದ್ಯಾಭ್ಯಾಸ ಮಾಡಿರುತ್ತಾರೆ. ಅವರು ಪ್ರತ್ಯೇಕವಾಗಿ ಬೆರಳಚ್ಚು ಸಂಬಂಧಿಸಿದಂತೆ ಯಾವುದೇ ತರಭೇತಿ ಪಡೆದುಕೊಂಡಿರುವುದಿಲ್ಲ. ಸದರಿ ಬೆರಳಚ್ಚು ಮುದ್ರಣವನ್ನು ಪ್ರತ್ಯೇಕವಾಗಿ ಇರಿಸಲಾಗಿರುತ್ತದೆ. ಸದರಿ ಮಾದರಿಯ ಬೆರಳಚ್ಚು ಮುದ್ರೆಗಳನ್ನು ಪರೀಕ್ಷೆಯ ನಂತರ ನಮ್ಮಲ್ಲಿಯೇ ಇರಿಸಿಕೊಂಡಿರುತ್ತೇವೆ. ಸದರಿ ಮಾದರಿಯ ಬೆರಳಚ್ಚು ಮುದ್ರೆಗಳ ಪ್ರತಿಯನ್ನು ಪೋಲಿಸರಿಗೆ ನೀಡಿರುತ್ತೇವೆ. ಸದರಿ ದಾಖಲಾತಿಗಳಿಗೆ ನಮ್ಮ ಸೀಲು ಮತ್ತು ಸಹಿಯನ್ನು ಹಾಕಿ ನೀಡಿರುತ್ತೇವೆ. ಸದರಿ ವರದಿಯ ಮೇಲೆ ಸಾಕ್ಷಿಗಳಾಗಿ ಸ್ಥಳೀಯರ ಸಹಿಯನ್ನು ಪಡೆದುಕೊಂಡಿರುವುದಿಲ್ಲ. ಸಾಮಾನ್ಯವಾಗಿ ಒಬ್ಬ ವ್ಯಕ್ತಿಯ ಬೆರಳಚ್ಚು ಇನ್ಸೊರ್ವ ವ್ಯಕ್ತಿಯ ಬೆರಳಚ್ಚಿಗೆ ಹೋಲಿಕೆಯಾಗುತ್ತದೆ ಎಂದರೆ ನೋಡಲು ಒಂದೇ ರೀತಿಯಾಗಿ ಕಂಡರೂ ಅದರ ಗುಣಲಕ್ಷಣಗಳಲ್ಲಿ ವ್ಯತ್ಯಾಸವಿರುತ್ತದೆ. ಸಾಮಾನ್ಯವಾಗಿ ಬಿಸಿ, ಧೂಳು ಮತ್ತು ತೇವಾಂಶವನ್ನು ಸ್ಪರ್ಶಿಸಿದ್ದಲ್ಲಿ ಬೆರಳಚ್ಚು ವ್ಯತ್ಯಾಸಗೊಳ್ಳುತ್ತದೆ ಎಂದರೆ ಸರಿಯಲ್ಲ. ಆರೋಪಿಯ ಬೆರಳಚ್ಚಿನ ಮಾದರಿಯನ್ನು ಹೊರತುಪಡಿಸಿ, ಇತರೆ ಬೆರಳಚ್ಚು ಮುದ್ರೆಗಳಿಗೂ ಹೋಲಿಕೆ ಮಾಡಿ ನೋಡಲಾಗಿರುತ್ತದೆ. ಸದರಿ ವಿಷಯದ ಕುರಿತು ನಮ್ಮ ವರದಿಯಲ್ಲಿ ಮಾಹಿತಿ ನೀಡಿರುತ್ತೇವೆ.

ಆರೋಪಿಯ ಬೆರಳಚ್ಚುವಿನ ಮುದ್ರೆಗಳನ್ನು ಪ್ರಪತ್ರದ ಮೂಲಕ ಪೋಲಿಸರು ಅವರ ಸಿಬ್ಬಂಧಿಯ ಮುಖಾಂತರ ನಮಗೆ ಕಳುಹಿಸಿಕೊಟ್ಟಿರುತ್ತಾರೆ. ಸದರಿ ಪ್ರಪತ್ರವನ್ನು ಸ್ವೀಕರಿಸಿದ ಬಾಬ್ತು ಯಾವುದೇ ಹಿಂಬರಹವನ್ನು ನೀಡಿರುವುದಿಲ್ಲ. ಬೆರಳಚ್ಚು ಮುದ್ರೆಯಲ್ಲಿ 8 ಗುಣಲಕ್ಷಣಗಳು ಕಂಡುಬರುತ್ತವೆ. AFIS software ತಂತ್ರಜ್ಞಾನದ ಮುಖಾಂತರ ಆರೋಪಿಯ ಬೆರಳಚ್ಚು ಮುದ್ರೆಯನ್ನು ಕಂಡುಹಿಡಿದಿರುತ್ತೇವೆ. ಬೀರುವಿನ ಹ್ಯಾಂಡಲ್ ಪಕ್ಕದಲ್ಲಿ ಆರೋಪಿಯ ಬೆರಳಚ್ಚುವಿನ ಮುದ್ರೆ ಸಿಕ್ಕಿರುತ್ತದೆ. ಪೋಲಿಸರೊಂದಿಗೆ ಶಾಮೀಲಾಗಿ ಆರೋಪಿಗೆ ಸಂಬಂಧಪಡದ ಬೆರಳಚ್ಚುವಿನ ಗುರುತು ವರದಿಯನ್ನು ನೀಡಲಾಗಿರುತ್ತದೆ ಎಂದರೆ ಸರಿಯಲ್ಲ. ಬೆರಳಚ್ಚು ತಂತ್ರಜ್ಞಾನದ ಬಗ್ಗೆ ನನಗೆ ಯಾವುದೇ ಅನುಭವವಿಲ್ಲದಿದ್ದರೂ ಸುಳ್ಳು ವರದಿಯನ್ನು ನೀಡಿರುತ್ತೇನೆ ಎಂದರೆ ಸರಿಯಲ್ಲ. ಆರೋಪಿಗೂ, ಈ ಪ್ರಕರಣಕ್ಕೂ ಮತ್ತು ನಾನು ನೀಡಿದ ವರದಿಗೂ ಒಂದಕ್ಕೊಂದು ಸಂಬಂಧ ಇಲ್ಲ ಎಂದರೆ ಸರಿಯಲ್ಲ. ನಾನು ನನ್ನ ಮುಖ್ಯ ವಿಚಾರಣೆಯಲ್ಲಿ ತಿಳಿಸಿರುವ ಅಂಶಗಳು ಸುಳ್ಳಿನಿಂದ ಕೂಡಿರುತ್ತವೆ ಎಂದರೆ ಸರಿಯಲ್ಲ.

**<u>ಮರು ವಿಚಾರಣೆ ಇಲ್ಲ</u>**

(ತೆರೆದ ನ್ಯಾಯಾಲಯದಲ್ಲಿ ನನ್ನ  ಉಕ್ತಲೇಖನದಂತೆ ಬೆರಳಚ್ಚು ಮಾಡಿ ಮುದ್ರಿಸಲಾಯಿತು)

ಓ ಹೇ ಕೇ ಸ ಇ ಎ ಒ.,

ಸಹಿ/-

ಸಾಕ್ಷಿ ಸಹಿಃ

1 ನೇ ಹೆಚ್ಚುವರಿ ಸಿವಿಲ್  ನ್ಯಾಯಾಧೀಶರು
ಮತ್ತು ಪ್ರದನ್ಯಾದಂ., ಮೂಡಿಗೆರೆ.